ಓ ಎಸ್ ನಂ. 45/2020 ಪಿ.ಡಬ್ಲ್ಯೂ 1

ಸಾಕ್ಷಿಯ ಹೆಸರು ಃ ರೋಚನ್ ಎಂ ಕೆ

ದಿನಾಂಕ 17-07-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಪಿ ಡಿ ವಕೀಲರಿಂದ,

ದಿಃ 20-04-2019 ರಂದು ಪ್ರತಿವಾದಿಯರು ನನಗೆ ಬರೆದುಕೊಟ್ಟ ನೊಂದಾಯಿತ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಅದಕ್ಕೆ 1 ರಿಂದ 3 ನೇ ಪ್ರತಿವಾದಿಯರು ಸಹಿಯನ್ನು ಕ್ರಮವಾಗಿ ನಿಪಿ 1(ಎ), 1(ಬಿ) ಮತ್ತು 1(ಸಿ) ಎಂದು ಗುರುತಿಸಲಾಯಿತು. ಸದರೀ ದಾಖಲೆಗೆ ಸಾಕ್ಷಿದಾರರಾಗಿ ದಿಲೀಪ್ ಮತ್ತು ಸಂಜಯ್ ಎಂಬುವವರು ಸಹಿ ಹಾಕಿರುತ್ತಾರೆ. ಸದರೀ ಸಹಿಗಳನ್ನು ನಿಪಿ 1(ಡಿ) ಮತ್ತು 1(ಇ) ಎಂದು ಕ್ರಮವಾಗಿ ಗುರುತಿಸಲಾಯಿತು ಸದರೀ ದಾಖಲೆಯನ್ನು ವಸಂತಕುಮಾರ್ ಎಂಬುವವರು ಬರೆದಿರುತ್ತಾರೆ. ಸದರೀ ಯವರ ಸಹಿಯನ್ನೂ ಕೂಡ ಸಾಕ್ಷಿ ಗುರುತಿಸಿರುತ್ತಾರೆ. ಸದರೀ ಸಹಿಯನು ನಿಪಿ 1(ಎಫ್) ಎಂದು ಗುರುತಿಸಲಾಯಿತು.

ನಂತರ ವಕೀಲರ ಮುಖಾಂತರ ಪ್ರತಿವಾದಿಯರಿಗೆ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ 2 ಎಂದು, ಹಾಗೂ ಅದಕ್ಕೆ ಪ್ರತಿವಾದಿಯರು ನೀಡಿದ ಉತ್ತರವನ್ನು ನಿಪಿ 3 ಎಂದು ಗುರುತಿಸಲಾಯಿತು. ಮೂರು ಅಂಚೆ ರಶೀತಿಗಳನ್ನು ಮತ್ತು ಒಂದು ಅಂಚೆ ಸ್ವೀಕೃತಿಯನ್ನು ಕ್ರಮಾಗಿ ನಿಪಿ 4 ರಿಂದ 7 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನ ಪರವಾಗಿ ಡಿಕ್ರಿ ಮಾಡಬೇಕಾಗಿ ಕೋರುತ್ತೇನೆ

ಪಾಟೀ ಸವಾಲುಃ ಪ್ರತಿವಾದಿಯರು ಏಕಪಕ್ಷಿಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.